

ಬೆಂಗಳೂರಿನಲ್ಲಿ ನಡೆದ ಕಛೇರಿಯೊಂದರಲ್ಲಿ ರಾಜೀವ ತಾರಾನಾಥ್

ಮಾಂಸವಿದೆಕೋ' ಚಿತ್ರಗಳಿಗೆ ಸಂಗೀತ ನೀಡುವಾಗ ಸಿದ್ಧ ಫಾರ್ಮುಲಾಗಳನ್ನು ಒಡೆದು ಸಂಗೀತ ನೀಡಲು ಯತ್ನಿಸಿದರು. 'ಶೃಂಗಾರಮಾಸ' ಚಲನಚಿತ್ರಕ್ಕೆ ಅವರು ರಾಗಸಂಯೋಜಿಸಿದ ಬೇಂದ್ರೆಯವರ 'ಕವನ ಬಂತಿದೋ ಶೃಂಗಾರಮಾಸ' ಆಲ್ ಟೈಮ್ ಕ್ಲಾಸಿಕ್. ಅಂತೆಯೇ ಮಲೆಯಾಳಂನ 'ಕಾಂಚನ ಸೀತಾ', 'ಪೊಕ್ಕುವಯಿಲ್' ಚಿತ್ರಗಳಿಗೂ ಪ್ರಶಸ್ತಿಗಳು ಬಂದವು. ರಾಜೀವ್ ತಾರಾನಾಥರ ಅಳಲು ಏನೆಂದರೆ, "ಕೊಟ್ಟಿರುವ ಸಂಗೀತವನ್ನೇ ಐದ್ಸಲ ಕೊಟ್ಟು, ಆರ್ಸಲ ಕೊಟ್ಟು, ನೂರಾರ್ಸಲ ಕೊಟ್ಟು, ಪ್ರೇಕ್ಷಕರಿಗೆ ಅದೇ ಬೇಕೂಂತ ಅನ್ನಿಸುವಂತೆ ಮಾಡಲಾಗಿದೆ. ಪ್ರೇಕ್ಷಕನನ್ನು ಚಾಲೆಂಜ್ ಮಾಡುವುದರ ಮೂಲಕ ಅವನ ಅಭಿರುಚಿಯನ್ನು ಚುರುಕುಗೊಳಿಸಬೇಕಾಗುತ್ತೆ. ಅದರ ಜವಾಬ್ದಾರಿ ನಮ್ಮದು, ನಿಮ್ಮದು." ಅವರಿಗೆ ಎ.ಆರ್. ರೆಹಮಾನ್ ಅಂದ್ರೆ ತುಂಬಾ ಮೆಚ್ಚುಗೆ. "ರೆಹಮಾನ್ ಒಬ್ಬ ಅಸಾಧಾರಣ ಸಂಗೀತ ನಿರ್ದೇಶಕ. ಅವನು ಸ್ಟುಡಿಯೋದಲ್ಲಿ, ಸಂಗೀತ ವಾದ್ಯಗಳ ನಡುವೆಯೇ ಬೆಳೆದ. ನಮಗೆ ಒಂದು ವಾದ್ಯದ ಸಾಧ್ಯತೆ ಮಾತ್ರ ಗೊತ್ತು. ಆದರೆ ರೆಹಮಾನ್‌ಗೆ ಎಲ್ಲಾ ವಾದ್ಯದ ಸಾಧ್ಯತೆಗಳೂ ತಿಳಿದಿವೆ. ಆತ ಒಬ್ಬ ಮೇಧಾವಿ."

ರಾಜೀವ್ ತಾರಾನಾಥರು ಏನೋ, ಹೇಗೋ ಮಾಡಿದರಾಯಿತು ಅನ್ನುವ ಜಾಯಮಾನದವರಲ್ಲ. ಎಲ್ಲದರಲ್ಲೂ ಪರಿಪೂರ್ಣತೆ ಬೇಕು. ನ. ರತ್ನ ಇದನ್ನು ಒತ್ತಿ ಹೇಳುತ್ತಿದ್ದರು. "ಒಮ್ಮೆ ನಾವು ಮೈಸೂರಿನಲ್ಲಿ 'ರಕ್ತಾಕ್ಷಿ' ನಾಟಕ ಮಾಡಿದ್ವಿ. ಅದ್ರಲ್ಲಿ ಭೂತ ಬರೋ ಒಂದು ದೃಶ್ಯವಿದೆ. ಅದಕ್ಕೊಂದು ಸ್ಲೈಡ್ ಮಾಡಿದ್ವಿ. ಅದಕ್ಕೆ ಹಿನ್ನೆಲೆ ಸಂಗೀತ ಕೊಡುವಾಗ ರಾಜೀವರು ನಮ್ಮ ಜೊತೆ ಗಂಟೆಗಟ್ಟಲೆ ಕೂತು ಸಂಯೋಜಿಸಿದ್ರು. ತಟ್ಟೆ ಬೀಳಿಸೋ ಸದ್ದು, ರಿವಾಲ್ವಿಂಗ್ ಕುರ್ಚಿಯನ್ನ ತಿರುಗಿಸಿದಾಗ ಬರ್‍ತಿದ್ದ ಕಿರಗುಟ್ಟೋ ಶಬ್ದ, ಹೀಗೆ ಏನೇನೋ ಸದ್ದುಗಳನ್ನು ಅವರು ಬಳಸಿ ಭೂತದೃಶ್ಯಕ್ಕೆ ಹಿನ್ನೆಲೆ ಸಂಗೀತ ನೀಡಿದರು. ಅವರ ಸಂಗೀತ ಬಹಳ ಪರಿಣಾಮಕಾರಿಯಾಗಿತ್ತು. ಅಷ್ಟು ದೊಡ್ಡ ಸಂಗೀತಗಾರರಾಗಿದ್ದರೂ ನಮಗಾಗಿ ಚಿಕ್ಕಪುಟ್ಟ ಸಂಗೀತ ಸಂಯೋಜನೆ ಮಾಡಿಕೊಡುವಾಗಲೂ ಅತ್ಯಂತ ಆಸ್ಥೆ ವಹಿಸ್ತಾ ಇದ್ರು. ಇದು ನನ್ನನ್ನು ತುಂಬಾನೆ ತಟ್ಟಿದೆ." ಅವರು ಎಂ.ಎಸ್. ಸತ್ಯು ಅವರ 'ಕುರಿ' ನಾಟಕಕ್ಕೆ ನೀಡಿದ ಸಂಗೀತ ಅದ್ಭುತವಾಗಿತ್ತು ಎಂದು ರಂಗನಿರ್ದೇಶಕ ರಘುನಂದನ್ ಹೇಳುತ್ತಾರೆ. "ಅವರು ಏನೇ ಮಾಡಲಿ ಅದು ಪರಿಪೂರ್ಣವಾಗಿರಬೇಕು, ಶ್ರೇಷ್ಠವಾಗಿರಬೇಕು. ಅದರಲ್ಲೊಂದು ಪರಿಪಕ್ವತೆ ಇರಬೇಕು."

ಈ ಅಂಶಗಳೆಲ್ಲಾ ಮೇಳೈಸಿ ಇವರ ಕಲಿಕೆ ಮತ್ತು ಗುರುತನ ಎರಡನ್ನೂ ರೂಪಿಸಿತ್ತು ಎನಿಸುತ್ತದೆ. ಇವರು ಯಾವ ಶಿಷ್ಯರಿಂದಲೂ ಎಂದೂ ಫೀಸ್ ಪಡೆದವರಲ್ಲ. ಅಮೆರಿಕ, ಜಪಾನ್, ಆಸ್ಟ್ರೇಲಿಯಾದ ಹಲವು ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಅವರ ದೇಹಾಂತವಾಗುವ ಒಂದು ತಿಂಗಳಿಗೆ ಮೊದಲು